ಈ) ತಂದಿಲ್ಲವಾದಲ್ಲಿ ಬಾಡಿಗೆದಾರರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಈ ವರದಿಯನ್ನು ಪರಿಗಣಿಸಿ ಸಮಗ್ರ ಬಿಲ್ಲನ್ನು ಅಧಿವೇಶನದಲ್ಲಿ ತಂದ ಮೇಲೆ ಜಂಟಿ ಸಮಾಲೋಚನಾ ಸಮಿತಿಗೆ ಮಂಡಿಸಲಾಗಿತ್ತು. ಆದರೆ ವಿಧಾನ ಸಭೆಯು ಆಗ ವಿಸರ್ಜಿತಗೊಂಡಿತು.

ಇ) ಮೇಲ್ಕಂಡ ವರದಿ ಮತ್ತು ಬಿಲ್ಲನ್ನು ಮತ್ತೆ ಪರಿಗಣಿಸಿ ಸಮಗ್ರವಾದ ತಿದ್ದುಪಡಿ ಸದನದಲ್ಲಿ ಮಂಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಮನೆ ಮಾಲೀಕರು ಹಾಗೂ ಬಾಡಿಗೆದಾರರ ಹಿತವನ್ನು ಗಮನದಲ್ಲಿಟ್ಟುಕೊಂಡು, ಸದರಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಉದ್ದೇಶದಿಂದ, ಕಾಯಿದೆಗೆ ಕೆಲವೊಂದು ಮುಖ್ಯ ತಿದ್ದುಪಡಿ ತರುವ ಬಗ್ಗೆ ಸೂಕ್ತ ವಿಧೇಯಕವನ್ನು ಸದನದಲ್ಲಿ ಆದಷ್ಟು ಜಾಗ್ರತೆ ಮಂಡಿಸಲಾಗುವುದು.

ಶ್ರೀ ಕ್ಷೇತ್ರ ಸೋಗಲದಲ್ಲಿ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿ ಕೆಲಸ.

96 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳು ಪಶ್ಚಿಮ ಘಟ್ಟ ಯೋಜನೆಯಲ್ಲಿ ಬರುತ್ತಿರುವ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ, ಈ ಪಶ್ಚಿಮ ಘಟ್ಟ ಯೋಜನೆಯಲ್ಲಿ ಬರುತ್ತಿರುವ ಬೈಲಹೊಂಗಲ ತಾಲ್ಲೂಕು ಬೈಲವಾಡವರ್ತಿ ಮತ್ತು ಸವದತ್ತಿ ತಾಲ್ಲೂಕು ಶ್ರೀ ಕ್ಷೇತ್ರ ಸೋಗಲದಲ್ಲಿ ಪಶ್ಚಿಮ ಘಟ್ಟ ಅಡಿಯ ಯೋಜನೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿ ಕೆಲಸವನ್ನು ತೆಗೆದುಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಇ) ಮಾನ್ಯ ತೋಟಗಾರಿಕೆ ಸಚಿವರು ಈ ಎರಡು ಸ್ಥಳಗಳಲ್ಲಿ ಇಲಾಖೆಯಿಂದ ಅಭಿವೃದ್ಧಿ ಪಡಿಸಲು ಜಿಲ್ಲಾ ತೋಟಗಾರಿಕೆ ಅಧಿಕಾರಿಗಳು ಬೆಳಗಾಂ ಇವರಿಗೆ ಆದೇಶ ನೀಡಿದ ಸಂಗತಿ ನಿಜವೆ?

ಈ) ಹಾಗಿದ್ದಲ್ಲಿ, ಜಿಲ್ಲಾ ತೋಟಗಾರಿಕೆ ಅಧಿಕಾರಿಗಳು ಈ ಸ್ಥಳದಲ್ಲಿ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿಪಡಿಸಲು ಯಾವ ಯಾವ ಕ್ರಮಗಳನ್ನು ಕೈಗೊಂಡಿರುವರು?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ಸಚಿವರು):

ಅ) ನಿಜ.

ಆ) ಕ್ರಮ ಕೈಗೊಳ್ಳಲಾಗಿದೆ.

ಇ) ಇಲ್ಲ.

ಈ) ಶ್ರೀ ಕ್ಷೇತ್ರ ಸೋಗಲ

ಈ ಕ್ಷೇತ್ರದ ಟ್ರಸ್ಟಿನ ಅಧೀನದಲ್ಲಿ ಸುಮಾರು 50 ಎಕರೆ ಪ್ರದೇಶವಿದ್ದು, ತೋಟಗಾರಿಕೆಗೆ ಸೂಕ್ತವಾದ ಸ್ಥಳಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು

ಕಳೆದ ಎರಡು ವರ್ಷಗಳಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಈಗಾಗಲೇ 150 ತೆಂಗಿನ ಸಸಿಗಳು, 100 ಮಾವಿನ ಗಿಡಗಳು ಮತ್ತು ಇತರೆ ಗಿಡಗಳಾದ ಗೋಡಂಬಿ, ಹುಣಸೆ, ಇತ್ಯಾದಿಗಳನ್ನು ನೆಡಲಾಗಿದೆ. ಮುಂಬರುವ ಮಳೆಗಾಲದಲ್ಲಿ ಇಲ್ಲಿ ಒಂದು ಚಿಕ್ಕ ಹೂವಿನ ತೋಟವನ್ನು ನಿರ್ಮಿಸಲು ಕ್ರಮ ವಿರ್ಪಡಿಸಲಾಗಿದೆ.

ಬೈಲವಾಡವರ್ತಿ

ಇಲ್ಲಿ ಸುಮಾರು ಅರ್ಧ ಎಕರೆಯಷ್ಟು ಪ್ರದೇಶವು ದೇವಸ್ಥಾನದ ಅಧೀನದಲ್ಲಿದ್ದು, ಇದರಲ್ಲಿ ಪವಿತ್ರವನ ಮತ್ತು ಹೂದೋಟವನ್ನು ನಿರ್ಮಿಸಲು ಯೋಜಿಸಲಾಗಿದ್ದು, ಮುಂಬರುವ ಮಳೆಗಾಲದಲ್ಲಿ ಈ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇಲಾಖಾ ತೋಟದ ಉತ್ಪನ್ನಗಳ ಹರಾಜು

116- ಶ್ರೀ ಹೆಚ್. ಎಮ್. ರೇವಣ್ಣ(ಮಾಗಡಿ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರದಲ್ಲಿ ಇಲಾಖಾ ತೋಟದ ಉತ್ಪನ್ನಗಳನ್ನು ಹರಾಜು ಮೂಲಕ ಮಾರಾಟ ಮಾಡಿ ಮಧ್ಯವರ್ತಿಗಳು ಲಾಭಗಳಿಸುವಂತೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಇದನ್ನು ತಪ್ಪಿಸಿ ಸ್ಥಳೀಯ ಬೆಳೆಗಾರರಿಗೆ ಈ ಉತ್ಪನ್ನಗಳ ಪ್ರಯೋಜನ ಪಡೆಯುವಂತೆ ಹಾಗೂ ಸ್ಥಳದಲ್ಲೇ ಮಾರಾಟ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?*

ಇ) *ಹಾಗಿದ್ದಲ್ಲಿ ಇದನ್ನು ಎಂದಿನಿಂದ ಜಾರಿಗೆ ತರಲಾಗುವುದು.*

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ತೋಟಗಾರಿಕೆ ಇಲಾಖೆಯಲ್ಲಿ ಅಸಮರ್ಪಕ ವೈಜ್ಞಾನಿಕ ಬೇಸಾಯ ಪದ್ಧತಿ..

117 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ): ಮಾನ್ಯ ತೋಟಗಾರಿಕೆ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇಲಾಖಾ ತೋಟಗಳಲ್ಲಿ ವೈಜ್ಞಾನಿಕ ಬೇಸಾಯ ಪದ್ಧತಿಗಳನ್ನು ಸಮರ್ಪಕವಾಗಿ ಅನುಸರಿಸುತ್ತಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರೀತಿ ವೈಜ್ಞಾನಿಕ ಬೇಸಾಯ ಪದ್ಧತಿಗಳನ್ನು ಬಳಸಿ ರೈತರಿಗೆ ಮಾದರಿಯಾಗುವಂತೆ ತೋಟಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಯೋಜನೆ ವಿನಾದರೂ ಸರ್ಕಾರದ ಮುಂದಿದೆಯೇ?*

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):

ಅ) ಇಲ್ಲ.

ಆ) ತೋಟಗಾರಿಕೆ ಇಲಾಖೆಯ ಎಲ್ಲಾ ಕ್ಷೇತ್ರಗಳಲ್ಲಿಯೂ ವೈಜ್ಞಾನಿಕ ಬೇಸಾಯ ಪದ್ಧತಿಯನ್ನು ಅನುಸರಿಸಿ ಬೇಸಾಯ ಮಾಡಲಾಗುತ್ತಿದೆ.